ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	80
ಸದಸ್ಯರ ಹೆಸರು	ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳಿಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	17.09.2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಇತ್ತೀಚಿನ ದಿನಗಳಲ್ಲಿ ಸಣ್ಣ ರೈತರಿಗೆ ಉಳುಮೆ ಮಾಡಲು ಎತ್ತುಗಳು ಸಿಗದೆ ತಾವೇ ಸ್ವತಃ ನೊಗಕ್ಕೆ ಹೆಗಲು ಕೊಟ್ಟು ಬಿತ್ತನೆ ಮಾಡುತ್ತಿರುವ ವರದಿಗಳು ದಿನ ಪತ್ರಿಕೆಗಳಲ್ಲಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪರಿಹಾರೋಪಾಯಗಳೇನು; (ವಿವರ ಒದಗಿಸುವುದು)	ಇತ್ತೀಚಿನ ದಿನಗಳಲ್ಲಿ ಸಣ್ಣ ರೈತರಿಗೆ ಉಳುಮೆ ಮಾಡಲು ಎತ್ತುಗಳು ಸಿಗದೆ ತಾವೇ ಸ್ವತಃ ನೊಗಕ್ಕೆ ಹೆಗಲು ಕೊಟ್ಟು ಬಿತ್ತನೆ ಮಾಡುತ್ತಿರುವ ವರದಿಗಳು ದಿನ ಪತ್ರಿಕೆಗಳಲ್ಲಿ ಬರುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ, ಕೃಷಿ ಇಲಾಖೆಯು ಎಲ್ಲಾ ವರ್ಗದ ಸಣ್ಣ ಭೂ ಹಿಡುವಳಿದಾರ ರೈತರಿಗೆ, ಉಳುಮೆ ಮಾಡಲು ಅನುಕೂಲವಾಗುವಂತೆ, ಸಣ್ಣ ಟ್ರ್ಯಾಕ್ಟರ್ ಹಾಗೂ ಅದಕ್ಕೆ ಪೂರಕವಾದ ಉಳುಮೆಗೆ ಉಪಯುಕ್ತವಾಗುವ ಯಂತ್ರೋಪಕರಣಗಳು, ಪವರ್ ಟಿಲ್ಲರ್, 1.5 HP ಯಿಂದ 9 HP ವರೆಗಿನ ಪವರ್ ವೀಡರ್ಸ್ (ಕಳೆ ತೆಗೆಯುವ ಯಂತ್ರ) ಗಳನ್ನು ಉಳುಮೆಗೆ ಅನುಕೂಲವಾಗುವ ಸಣ್ಣ ನೇಗಿಲು (ಎಂ.ಬಿ ಪ್ಲೋ), ಕಲ್ಟಿವೇಟರ್, ಕೇಜ್ ವೀಲ್, ಬಿತ್ತನೆ ಕೂರಿಗೆ ಮತ್ತು ಅಂತರ ಬೇಸಾಯ ಉಪಕರಣಗಳೊಂದಿಗೆ ಎಂಪ್ಯಾನೆಲ್ ಮಾಡಿ ಸಹಾಯಧನವನ್ನು ಈಗಾಗಲೇ ಒದಗಿಸಲಾಗುತ್ತಿದೆ.
ಆ)	ಈ ದಿನಗಳಲ್ಲಿ ಸಣ್ಣ ರೈತರುಗಳು ಎತ್ತುಗಳಿಗೆ ಮೇವನ್ನು ಒದಗಿಸಲಾಗದೆ ಸಾಕುತ್ತಿಲ್ಲದಿರುವುದರಿಂದ, ಇದರ ಬದಲಿಗೆ ಸರ್ಕಾರವೇ ತಾಲ್ಲೂಕಿಗೊಂದರಂತೆ ಪಶುಪಾಲನಾ ಕೇಂದ್ರುಗಳನ್ನು ತೆರೆದು ಗಟ್ಟಿಮುಟ್ಟಾದ ಎತ್ತಿನ ತಳಿಗಳನ್ನು ಬೆಳೆಸಿ, ಉಳುಮೆ ಕಾಲದಲ್ಲಿ ರೈತರಿಗೆ ಸಿಗುವಂತಹ ಕಾರ್ಯ ಮಾಡಲು ಸರ್ಕಾರದ ನಿಲುವೇನು? (ವಿವರ ಒದಗಿಸುವುದು)	ತಾಲ್ಲೂಕಿಗೆ ಒಂದರಂತೆ ಪಶುಪಾಲನಾ ಕೇಂದ್ರುಗಳನ್ನು ತೆರೆದು ಗಟ್ಟಿಮುಟಾದ ಎತ್ತಿನ ತಳಿಗಳನ್ನು ಬೆಳೆಸಿ, ಉಳುಮೆ ಕಾಲದಲ್ಲಿ ರೈತರಿಗೆ ಸಿಗುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಬರಗಾಲ ಮತ್ತು ಪ್ರವಾಹದ ಪರಿಸ್ಥಿತಿಯಲ್ಲಿ ಮಾತ್ರ ರೈತರ ಬೇಡಿಕೆಗೆ ಅನುಸಾರ ಮೇವು ಬ್ಯಾಂಕ್ ಸ್ಥಾಪಿಸಿ ಮೇವನ್ನು ರಿಯಾಯಿತಿ ದರದಲ್ಲಿ ನೀಡಲಾಗುವುದು.

ಸಂಖ್ಯೆ: AGRI-ACT/125/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು